# ಕೊರೊನಾ, ಚಂಡಮಾರುತದ ತಾಂಡವ

ಯಾವಾಗ ಜನ ನನ್ನ ನೆರಳಲ್ಲಿ ಪವಡಿಸಲಾರಂಭಿಸಿದರೋ ಆಗ ಆತ ನನ್ನನ್ನು ಕೊನೆಗೆ ನೋಡಿಕೊಂಡರಾಯಿತೆಂದು ಹಾಗೆಯೇ ಬಿಟ್ಟು ದೂರದಿಂದ ಕೆಲಸ ಶುರುಮಾಡಿದ. ಆತ ನಿರ್ಮಿಸಿಕೊಂಡಿದ್ದ ಅಲೈನ್‌ಮೆಂಟ್‌ನಲ್ಲಿ ನನ್ನನ್ನು ಕತ್ತರಿಸಿಕೊಂಡೇ ಕೆಲಸ ನಿರ್ಮಿಸುವಂತೆ ರಚಿಸಲಾಗಿತ್ತು. ಶೇಕಡ ಎಂಬತ್ತರಷ್ಟು ಕೆಲಸ ಮುಗಿದ ಮೇಲೆ ನನ್ನನ್ನು ಕತ್ತರಿಸದಿದ್ದರೆ ಪೂರ್ಣ ಕೆಲಸ ಅಸಾಧ್ಯವೆಂಬುದು ಮನವರಿಕೆಯಾದಾಗ ನ್ಯಾಯಾಲಯವೇ ನನ್ನನ್ನು ಕಡಿದು ಮುಂದಿನ ಕೆಲಸ ಮಾಡಲು ಅನುಮತಿ ನೀಡುತ್ತದೆಂಬುದು ಆತನಿಗೆ ಗೊತ್ತಿತ್ತು. ಆ ಕಂಪನಿಯು ದೆಹಲಿ ಮೂಲದ್ದಾದ್ದರಿಂದ ಅದಕ್ಕೆ ಸ್ಥಳೀಯ ಜನರ ಭಾವನೆಗಳಿಗೆ ಬೆಲೆಯೇ ಇರಲಿಲ್ಲ. ಇಡೀ ದೇಶವೇ ಪ್ರಗತಿಯತ್ತ ದಾಪುಗಾಲಲ್ಲಿ ಮುನ್ನಡೆಯುತ್ತಿರುವಾಗ ಸ್ಥಳೀಯರು ಅವರಿಗೆ ಮೂಢರಂತೆ ಕಂಡುಬರುತ್ತಿದ್ದರು. ಅಂತಿಮವಾಗಿ ಈ ದೇಶದಲ್ಲಿ ಕಾನೂನಿನ ಮುಂದೆ ಯಾರೂ ನಿಲ್ಲಲಾರರೆಂಬ ಅಂತಿಮ ಸತ್ಯ ಅವರಿಗೆ ಗೊತ್ತಿದ್ದೇ ಈ ಟೆಂಡರನ್ನು ಹಾಕಿದ್ದರು.

ದೂರದಿಂದ ಅಂಡರ್‌ಪಾಸ್‌ಗಾಗಿ ನೆಲ ಬಗಿಯುವ, ಮತ್ತು ಫ್ಲೈಓವರ್‌ಗಾಗಿ ಪಿಲ್ಲರ್‌ಗಳನ್ನು ನಿರ್ಮಿಸಲು ಗುಂಡಿ ತೋಡುವ ಕಾರ್ಯ ಪ್ರಗತಿಯಲ್ಲಿತ್ತು. ಒಂದು ಸಲ ಫ್ಲೈಓವರ್ ನಿರ್ಮಾಣವಾಗಿಬಿಟ್ಟರೆ ತಮ್ಮ ರೈಲುಹಳಿಗಳನ್ನು ಹಾಕುವ ಸಲುವಾಗಿನ ಪಿಲ್ಲರ್‌ಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ಮೆಟ್ರೋದವರೂ ಪಿಲ್ಲರ್ ಹಾಕುವ ಕೆಲಸವನ್ನು ಶುರು ಮಾಡಿಬಿಟ್ಟರು.

ನಾಲ್ಕೂ ಕಡೆಯಿಂದ ಕೆಲಸ ಆರಂಭವಾಗಿಯೇಬಿಟ್ಟಿತು. ಅದರ ಧೂಳು, ಸದ್ದು ಪದೇ ಪದೇ ನನ್ನನ್ನೂ, ನನ್ನ ಕೆಳಗೆ ಕುಳಿತ ಧರಣಿ ನಿರತರನ್ನೂ ಉಸಿರುಗಟ್ಟಿಸುತ್ತಿತ್ತು. ಬೇಕೆಂದೇ ಇನ್ನಷ್ಟು ಸದ್ದು ಬರುವಂತೆ, ಮತ್ತಷ್ಟು ಧೂಳು ಏಳುವಂತೆ ಮಾಡುತ್ತಿದ್ದಾರೆ ಎಂಬ ಅನುಮಾನ ನನ್ನ ಅಭಿಮಾನಿಗಳಿಗೆ ಬಂದಿತ್ತು.

ಆ ಗುತ್ತಿಗೆದಾರ ಕಂಪನಿಯ ಕೆಲಸಗಾರರು ಹೀಗೆ ಚಳುವಳಿ ನಿರತರೆಲ್ಲ ಹುಸಿ ಹೋರಾಟಗಾರರೆಂದೂ, ಪರಿಸರದ ಹೆಸರಿನಲ್ಲಿ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆಂದೂ, ಸ್ವಲ್ಪ ದಿನ ಹೀಗೆ ಚಳವಳಿ ಅದೂ ಇದೂ ಅಂತ ಬೆದರಿಸಿ ಒಂದಷ್ಟು ದುಡ್ಡು ಇಸಕೊಂಡು ನಾಪತ್ತೆಯಾಗಿಬಿಡುತ್ತಾರೆಂದೂ ಉಡಾಫೆಯಿಂದ ಮಾತಾಡುತ್ತಿದ್ದರು. ಸಾಲದ್ದಕ್ಕೆ, ನಮ್ಮ ಕಂಪನಿ ಇಡೀ ಪ್ರಪಂಚದ ಎಲ್ಲ ಕಡೆಯೂ ಕೆಲಸ ಮಾಡಿದ್ದು ಇಂಥ ಅದೆಷ್ಟು ಪ್ರತಿಭಟನೆ, ಪ್ರದರ್ಶನಗಳನ್ನು ಕಂಡಿಲ್ಲ ಎಂದು ಕಂಪನಿಯ ಎಂ.ಡಿ. ಮೀಟಿಂಗಲ್ಲಿ ಹೇಳಿದ್ದಾಗಿ ಮಾತಾಡಿಕೊಳ್ಳುತ್ತಿದ್ದರು.

ಅದಕ್ಕೆ ಪೂರಕವಾಗಿ ಪ್ರತಿಭಟನೆಯ ಉಸ್ತುವಾರಿ ವಹಿಸಿದ್ದ ದೊಡ್ಡ ದೊಡ್ಡ ವ್ಯಕ್ತಿಗಳನ್ನು ಮೊದಲು ತಡವುದನ್ನು ಬಿಟ್ಟು ಸಣ್ಣಪುಟ್ಟ ಪುಡಿ ಲೀಡರ್‌ಗಳನ್ನು ಕರೆದು ಮಾತಾಡಿ ಹತ್ತು ಸಾವಿರ, ಇಪ್ಪತ್ತು ಸಾವಿರ, ಐವತ್ತು ಸಾವಿರ, ಲಕ್ಷ ಹೀಗೆ ಅವರ ಯೋಗ್ಯತಾನುಸಾರ ಕೊಟ್ಟು ಸರಿಮಾಡಿಕೊಂಡರು. ಅದಕ್ಕೆ ಪ್ರತಿಫಲವಾಗಿ ಅವರು ಏನು ಮಾಡಬೇಕಾಗಿತ್ತೆಂದರೆ, ಏನೂ

